ದಿಃ25.07.2025ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

ದಿಃ07.08.2014ರಂದು ಚಾಸಾ.29ರ ಹೇಳಿಕೆಯನ್ನು ಹಾಗೂ ದಿಃ12.08.2014ರಂದು ಚಾಸಾ.16, 18 ಮತ್ತು 19ರ ಹೇಳಿಕೆಗಳನ್ನು ಪಡೆದುಕೊಂಡೆ. ದಿಃ29.11.2014ರಂದು ಈ ಪ್ರಕರಣದ 2ನೇ ಆರೋಪಿಯಾದ ಕವಿತಾ ಕರ್ತವ್ಯ ನಿರ್ವಹಿಸುತ್ತಿದ್ದಂತಹ ಶಾಲಾ ಮುಖ್ಯೋಪಾಧ್ಯಾಯರಿಂದ ಅವರ ಕರ್ತವ್ಯಕ್ಕೆ ಸಂಬಂಧಿಸಿದಂತೆ ದಾಖಲಾತಿಯನ್ನು ಪಡೆದುಕೊಂಡೆ. ಅದು ನಿ.ಪಿ.9 ಇದ್ದು, ಅದನ್ನು ಸ್ವೀಕರಿಸಿದ ಸಲುವಾಗಿ ಸಾಕ್ಷಿಯ ಸಹಿಯನ್ನು ನಿ.ಪಿ.9(ಎ) ಎಂದು ಗುರುತಿಸಲಾಯಿತು. ದಿಃ16.02.2015ರಂದು ಈ ಪ್ರಕರಣದ ಕಡತವನ್ನು ಜಿಲ್ಲಾ ಸತ್ರ ನ್ಯಾಯಾಲಯ, ರಾಮನಗರಕ್ಕೆ ವರ್ಗಾವಣೆ ನೀಡುವಂತೆ ಕೋರಿ ಮಾಗಡಿ ಜೆಎಂಎಫ್‌ಸಿ., ನ್ಯಾಯಾಲಯಕ್ಕೆ ಮನವಿ ಪತ್ರ ನೀಡಿದೆ.

**<u>ಪ್ರಶ್ನೆಃ</u>** ನಿ.ಪಿ.30 ದೋಷಾರೋಪಣ ಪಟ್ಟಿಯೊಂದಿಗೆ ಸಲ್ಲಿಸಿರುವ ದಾಖಲಾತಿ ಕಾರ್ಬನ್ ಪ್ರತಿಯಾಗಿದ್ದು ಅದರ ಅಸಲು ದಾಖಲಾತಿ ಎಲ್ಲಿದೆ?

**<u>ಉತ್ತರಃ</u>** ಕಿಮ್ಸ್ ಆಸ್ಪತ್ರೆ, ಬೆಂಗಳೂರಿನಿಂದ ಸದರಿ ದಾಖಲಾತಿಯನ್ನು ನಾವು ಸ್ವೀಕರಿಸಿದ್ದು, ಅದರಲ್ಲಿಯೇ ಅಸಲು ಸಹಿ ಮತ್ತು ಮೊಹರು ಇರುತ್ತದೆ.

2. ಚಾಸಾ.1 ಅವರ ಆಸ್ಪತ್ರೆಯಿಂದ ಬಿಡುಗಡೆಗೊಂಡಂತಹ ದಾಖಲಾತಿಯೂ ಸಹ ಅದೇ ರೀತಿ ಇದ್ದು, ಅದರಲ್ಲಿ ಅಸಲು ಸಹಿ ಮತ್ತು ಮೊಹರು ಇದೆ. ಈಗಾಗಲೇ ನಾನು ದಿಃ28.10.2021ರಂದು ನೀಡಿರುವ ಸಾಕ್ಷಿಯಲ್ಲಿ ಹೇಳಿಕೊಂಡಿರುವಂತಹ ಸಿಸಿಟಿವಿ ಫೂಟೇಜ್‌ನ್ನು ಪೆನ್ ಡ್ರೈವ್‌ನಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವಂತಹ ಪೆನ್ ಡ್ರೈವ್‌ನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ಪೆನ್ ಡ್ರೈವ್‌ನ್ನು ಪಿ.ಆರ್.ನಂಬರ್.14/2019ರ ಅನ್ವಯ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

3. ಪ್ರಾಸಾ.9 ಮತ್ತು 12 ನನ್ನ ಸಮಕ್ಷಮ ನಿ.ಪಿ.18 ಮತ್ತು 34ರಂತೆ ಹೇಳಿಕೆ ನೀಡಿರುತ್ತಾರೆ.

<u>ಪಾಟೀ ಸವಾಲುಃ ಶ್ರೀ. ಎಂ.ಎನ್.ಪಿ., ವಕೀಲರಿಂದ 2, 6 ಮತ್ತು 7ನೇ ಆರೋಪಿಗಳ ಪರವಾಗಿಃ</u>

ದಿಃ05.08.2014ರಂದು ನಾನು ಹೇಳಿಕೆಯನ್ನು ಚಾಸಾ.29ರಿಂದ ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆ. ಚಾಸಾ.29 ಅವರು ಚಾಸಾ.1ರ ಹೇಳಿಕೆಯನ್ನು ಠಾಣೆಯಲ್ಲಿ ತಯಾರಿಸಿ ನನಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ.29 ಅಂದು ಕಿಮ್ಸ್ ಆಸ್ಪತ್ರೆಗೆ ಹೋಗಿಲ್ಲ ಎಂದರೆ ಸರಿಯಲ್ಲ. 2ನೇ ಆರೋಪಿ ನ್ಯಾಯಾಲಯದಿಂದ ಜಾಮೀನು ಆದೇಶ ಪಡೆದು ಠಾಣೆಗೆ ಎಷ್ಟು ಗಂಟೆಗೆ ಬಂದಿದ್ದರು ಎಂದು ನನಗೀಗ ನೆನಪಿಲ್ಲ. ಠಾಣೆಯಲ್ಲಿ ಅವರು ಜಾಮೀನಿನ ದಾಖಲಾತಿಗಳನ್ನು ನೀಡಿ ನಾವು ಕ್ರಮ

ಜರುಗಿಸಲು ಸುಮಾರು ಅರ್ಧ ಗಂಟೆಗಳ ಕಾಲ ಬೇಕಾಗುತ್ತದೆ. ಅಂದು ನಾನು ಠಾಣೆಯಲ್ಲಿ ಇದ್ದೆ. ಠಾಣಾ ಕರ್ತವ್ಯ ಹೇಗಿರುತ್ತದೆಯೋ ಹಾಗೆ ನಾವು ಠಾಣೆಯಲ್ಲಿ ಇದ್ದು, ಬೆಳಿಗ್ಗೆ 8.00 ಗಂಟೆಯಿಂದ ರಾತ್ರಿ 10.30ರವರೆಗೆ ಸಾಮಾನ್ಯವಾಗಿ ಇರುತ್ತೇನೆ. ಅಂದು ನಾನು ಠಾಣೆ ಬಿಟ್ಟು ಎಲ್ಲಿಯೂ ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

2. ಮಹಜರ್ ಕ್ರಮವನ್ನು ಮಧ್ಯಾಹ್ನ 1.30ರಿಂದ 2.30ರವರೆಗೆ ಅಂಜನಾನಗರದಲ್ಲಿ 2ನೇ ಆರೋಪಿ ತೋರಿಸಿದ ಸ್ಥಳದಲ್ಲಿ ಮಹಜರ್ ಬರೆಯಲಾಗಿದೆ. ಮಹಜರ್ ಸಾಕ್ಷಿಗಳು ಯಾರ್ಯಾರು ಇದ್ದರು ಎಂದು ಮಹಜರ್‌ನಲ್ಲೇ ನಮೂದಿಸಿರುತ್ತೇನೆ. ನಾನು ಯಾವುದೇ ಮಹಜರ್ ಬರೆದಿಲ್ಲ ಎಂದರೆ ಸರಿಯಲ್ಲ. ದಿಃ06.09.2014ರಂದು ಠಾಣೆ ಬಿಟ್ಟು ನಾನು ಬೆಂಗಳೂರಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಮಹಜರ್ ಬರೆದಿಲ್ಲ ಎಂದರೆ ಸರಿಯಲ್ಲ. ದಿಃ10.12.2014ರಂದು ನಾನು ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅಂದು ಯಾವುದೇ ಮಹಜರ್ ಬರೆದಿಲ್ಲ ಎಂದರೆ ಸರಿಯಲ್ಲ. ಬೆಂಗಳೂರಿನ ಕಿಮ್ಸ್ ಆಸ್ಪತ್ರೆಯಿಂದ ಮಾಗಡಿ ಪೊಲೀಸ್ ಠಾಣೆಗೆ ಬರಲು ಸಂಚಾರಿ ದಟ್ಟಣೆಯ ಮೇರೆಗೆ 1 ಗಂಟೆ 15 ನಿಮಿಷದಿಂದ 1 ಗಂಟೆ 30 ನಿಮಿಷ ಬೇಕಾಗುತ್ತದೆ. ದಿಃ 05.08.2014 ರಂದು 23 ಗಂಟೆ 50 ನಿಮಿಷಕ್ಕೆ ಚಾಸಾಃ 29 ರವರು ಚಾಸಾಃ1 ರವರ ದೂರಿನ ಹೇಳಿಕೆಯನ್ನು ತಂದು

ಹಾಜರುಪಡಿಸಿರುತ್ತಾರೆ. ದಿಃ 04.08.2014 ರಂದು ಚಾಸಾಃ1 ರವರು ಮಾಗಡಿಗೆ ಬಂದಿದ್ದರೋ ಇಲ್ಲವೋ ಎಂದು ನನ್ನ ತನಿಖೆಯಲ್ಲಿ ನಾನು ಪರಶೀಲನೆ ಮಾಡಿರುವುದಿಲ್ಲ. ಪಿರ್ಯಾದು ತನ್ನ ಮುಂದುವರೆದ ಹೇಳಿಕೆ ನೀಡಿದ್ದು ಆ ಮೂಲಕ ಈ ಪ್ರಕರಣದಲ್ಲಿ ಎಸ್ ಸಿ ಎಸ್ ಟಿ ಕಾಯ್ದೆ ಅನ್ವಯವಾಗುವುದರಿಂದ ಮುಂದಿನ ತನಿಖೆಗಾಗಿ ಕಡತವನ್ನು ಹಸ್ತಾಂತರಿಸಿರುತ್ತೇನೆ. ಪಿರ್ಯಾದುದಾರ ತನ್ನ ದೂರಿನಲ್ಲಿ ಜಾತಿ ನಿಂದನೆಗೆ ಸಂಬಂಧಿಸಿದಂತ ನಿಖರವಾದ ಶಬ್ಧಗಳನ್ನು ತನ್ನ ದೂರಿನಲ್ಲಿ ಹೇಳಿಕೊಂಡಿರುವುದಿಲ್ಲ.

ನಿಪಿಃ 24 ರಲ್ಲಿ 2ನೇ ಅರೋಪಿ ಕವಿತಳ ಸಹಿ ಇಲ್ಲ ಎಂದರೆ ಸಾಕ್ಷಿ ಆಕೆ ತನ್ನ ಮುಂದುವರೆದ ಹೇಳಿಕೆಯಲ್ಲಿ ತಾನೇ ಗಾಯತ್ರಿ ಎಂದು ಸಹಿ ಮಾಡಿದ್ದೇನೆ ಎಂದು ಹೇಳಿಕೊಂಡಿದ್ದಾಳೆ ಎಂದು ಸಾಕ್ಷಿ ಉತ್ತರಿಸುತ್ತಾರೆ. ಸದರಿ ಪತ್ರವನ್ನು ಆಕೆ ಬರೆದಿದ್ದಾಳೆ ಎಂದು ನಮ್ಮ ತನಿಖೆಯಲ್ಲಿ ಕಂಡುಬಂದಿರುತ್ತದೆ. ಅದು ಆಕೆಯ ಕೈ ಬರಹ ಹೌದೋ ಅಲ್ಲವೋ ಎಂದು ಆಕೆಯ ಬರವಣಿಗೆ ಇರುವಂತ ಬೇರೆ ದಾಖಲಾತಿಯೊಂದಿಗೆ ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಪಿಃ 24 ನ್ನು 2ನೇ ಆರೋಪಿ ಬರೆದಿಲ್ಲ ಅದನ್ನು ನಾನೇ ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 06.09.2014 ಮತ್ತು 12.08.2014 ರ ಮಹಜರುಗಳನ್ನು ನಾನು ಠಾಣೆಯಲ್ಲೀ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಚಾಸಾಃ 1 ಠಾಣೆಗೆ ಬಂದಿದ್ದ ಎಂದು ಸಾಬೀತು ಪಡಿಸಲು ಸಿ

ಸಿ ಟಿವಿ ಫುಟೇಜ್ ಹಾಜರುಪಡಿಸಿರುವುದಿಲ್ಲ. ಆತ ಯಾವ ವಾಹನದಲ್ಲಿ ಮಾಗಡಿಗೆ ಬಂದಿದ್ದಾನೆ ಎಂದು ಬಸ್ ಟಿಕೆಟ್ ಅಥವಾ ಇನ್ಯಾವುದೇ ದಾಖಲಾತಿಯನ್ನು ಕಲೆ ಹಾಕಿರುವುದಿಲ್ಲ. ಚಾಸಾಃ 1 ಠಾಣೆಗೆ ಆಟೋದಲ್ಲಿ ಬಂದ ಎಂದು ಹೇಳುವಂತ ಆಟೋ ಚಾಲಕನನ್ನು ವಿಚಾರಣೆ ಮಾಡಿರುವುದಿಲ್ಲ. 2, 6 ಮತ್ತು 7ನೇ ಆರೋಪಿಗಳಿಗೆ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿ 2, 6 ಮತ್ತು 7 ರವರ ಸ್ವ ಇಚ್ಚಾ ಹೇಳಿಕೆಯನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ಬರೆದುಕೊಡಿಂದ್ದೇವೆ ಎಂರೆ ಸರಿಯಲ್ಲ. ಅವರು ಯಾವುದೇ ಸ್ವ ಇಚ್ಚಾ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ. ಕೆ.ಟಿ.ವಿ., ವಕೀಲರಿಂದ 3, 5, 8, 9ನೇ ಆರೋಪಿಗಳ ಪರವಾಗಿಃ</u>

ಚಾಸಾ.1 ಯಾವ ಆಸ್ಪತ್ರೆಗೆ ದಾಖಲಾಗಿರುತ್ತಾರೆ ಎಂಬುದು ಎಂಎಲ್‌ಸಿ ಮೂಲಕ ನನಗೆ ತಿಳಿಯಿತು. ನಮಗೆ ಆಸ್ಪತ್ರೆಯಲ್ಲಿ ದಾಖಲಾದ ಬಗ್ಗೆ ದಿಃ05.08.2014ರಂದು ಮಾಹಿತಿ ಬಂದಿರುತ್ತದೆ. ಅದೇ ದಿನ ಚಾಸಾ.29ನ್ನು ನಾನು ರಾತ್ರಿ ಸುಮಾರು 8.00 ಗಂಟೆಗೆ ಮಾಗಡಿಯಿಂದ ಬೆಂಗಳೂರು ಕಿಮ್ಸ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ಚಾಸಾ.1, ಚಾಸಾ.29ರ ಸಮಕ್ಷಮ ಏನು ಹೇಳಿಕೆ ಕೊಟ್ಟಿರುತ್ತಾರೆ ಎಂದು ನನಗೆ ಖುದ್ದು ಮಾಹಿತಿ ಇಲ್ಲ ಆದರೆ, ಚಾಸಾ.29 ಹೇಳಿಕೆಯನ್ನು ಠಾಣೆಗೆ ತಂದ ನಂತರ ಆ ಮೂಲಕ ತಿಳಿದಿರುತ್ತದೆ. ಚಾಸಾ.29 ಅವರು ಚಾಸಾ.1ರ

ಹೇಳಿಕೆಯನ್ನು ತಂದು ಹಾಜರುಪಡಿಸಿದ ನಂತರ ಅದನ್ನು ತಿಳಿದುಕೊಂಡು ನಾನು ಖುದ್ದಾಗಿ ಆಸ್ಪತ್ರೆಗೆ ಭೇಟಿ ನೀಡಿರುವುದಿಲ್ಲ. ಚಾಸಾ.1ರ ಪ್ರಕಾರ ಬರವಣಿಗೆಯ ಕಾಗದದ ಮೇಲೆ ಸಹಿ ಪಡೆದ ನಂತರ ಖಾಲಿ ಹಾಳೆಯ ಮೇಲೂ ಸಹ ಪೊಲೀಸರು ತನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದು ಹೇಳಿರುತ್ತಾನೆ ಎಂದರೆ ಅದು ಸರಿಯಲ್ಲ. ಚಾಸಾ.29 ಯಾವುದೇ ಹೇಳಿಕೆಯನ್ನು ಪಡೆದುಕೊಂಡಿಲ್ಲ ಹಾಗೂ ನಾನು ಚಾಸಾ.29ನ್ನು ಚಾಸಾ.1ರ ಹೇಳಿಕೆ ಪಡೆಯುವಂತೆ ನಿಯೋಜಿಸಿಲ್ಲ ಎಂದರೆ ಸರಿಯಲ್ಲ.

2. ದಿಃ05.08.2014ರಂದು ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ. ಯಾವ ಯಾವ ಸಾಕ್ಷಿದಾರರ ಹೇಳಿಕೆಗಳನ್ನು ಯಾವ ಯಾವ ದಿನಾಂಕದಂದು ಪಡೆದುಕೊಳ್ಳಲಾಗಿದೆ ಎಂದು ನಮ್ಮ ಕೇಸ್ ಡೈರಿಯಲ್ಲಿ ನಮೂದಾಗುತ್ತದೆ. ಸದರಿ ಸಿಡಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿಲ್ಲ, ಆ ಕಾರಣ ನಮ್ಮ ಸಿಡಿಯನ್ನು ಕಡತದೊಂದಿಗೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಾನೇ ಪಡೆದಿರುವ ಬಗ್ಗೆ ಸಿಡಿಯಲ್ಲಿ ನಮೂದಾಗಿದೆ. ಪೊಲೀಸ್ ಡೈರಿಯಲ್ಲಿ ಪ್ರಕರಣದ ಬಗ್ಗೆ ಮಾತ್ರ ನಮೂದನೆ ಇದ್ದು, ಏನೇನು ತನಿಖೆ ನಡೆಯುತ್ತಿದೆ ಎಂಬುದರ ಬಗ್ಗೆ ನಮೂದನೆ ಇಲ್ಲ. ಈ ಪ್ರಕರಣದಲ್ಲಿ 4 ಆರೋಪಿಗಳನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಉಳಿದ 7 ಆರೋಪಿಗಳು ಜಾಮೀನು ಪಡೆದುಕೊಂಡಿರುತ್ತಾರೆ. ಚಾಸಾ.1 ಆರೋಪಿಗಳ

ಹೆಸರುಗಳನ್ನು ಹೇಳಿರುತ್ತಾರೆ. ಆರೋಪಿಗಳನ್ನು ದಸ್ತಗಿರಿ ಮಾಡಿದ ನಂತರ ಅವರ ಗುರುತು ಹಚ್ಚುವ ಕವಾಯತ್ತನ್ನು ನಡೆಸಿರುವುದಿಲ್ಲ. ಚಾಸಾ.1 ತನ್ನ ಹೇಳಿಕೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿದಂತಹ ವೈದ್ಯರು ಯಾರು ಎಂದು ಹೇಳಿರುವುದಿಲ್ಲ ಎಂದರೆ ಸರಿ. ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದ ಕಾರ್ಯವಿಧಾನದ ಸಿಡಿಯನ್ನು ಮತ್ತು ಅದನ್ನು ಡೌನ್‌ಲೋಡ್ ಮಾಡಿದಂತಹ ದಾಖಲಾತಿಯನ್ನು ನ್ಯಾಯಾಲಯಕ್ಕೆ ಒದಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಿಸಿಟಿವಿ ಫೂಟೇಜ್‌ನ್ನು ನಮ್ಮ ನಿವೇದನೆಯ ಅನುಸಾರ ಆಸ್ಪತ್ರೆಯವರೇ ಪೆನ್‌ಡ್ರೈವ್‌ಗೆ ಅಳವಡಿಸಿ ಕೊಟ್ಟಿದ್ದು, ಅದನ್ನು ಯಾವ ಮೂಲಕ ಪಡೆದುಕೊಳ್ಳಲಾಗಿದೆ ಎಂದು ಮಹಜರ್ ನಲ್ಲಿ ಕಾಣಿಸಲಾಗಿದೆ. ಎಷ್ಟು ಗಂಟೆಗೆ ಘಟನೆ ನಡೆದಿದೆ ಎಂದು ದೂರಿನಲ್ಲಿ ನಮೂದಾಗಿರುತ್ತದೆ. ಚಾಸಾ.1 ನ್ಯಾಯಾಲಯದ ಮುಂದೆ ನೀಡಿರುವಂತ ಸಾಕ್ಷಿ ವಿಚಾರಣೆಯಲ್ಲಿ ತಾನು ಹೇಳಿದಂತೆ ಪೊಲೀಸರು ತನ್ನ ದೂರನ್ನು ಬರೆದುಕೊಂಡಿಲ್ಲ, ಖಾಲಿ ಪೇಪರಿನ ಮೇಲೆ ಸಹಿ ಪಡೆದು ನಂತರ ತಮಗೆ ಬೇಕಿದ್ದ ರೀತಿಯಲ್ಲಿ ಪೊಲೀಸರೇ ಬರೆದುಕೊಂಡಿರುತ್ತಾರೆ, ಈ ಪ್ರರಕಣದಲ್ಲಿ ಕೆಲವು ನಿರಪರಾಧಿಗಳೂ ಸಹ ಇದ್ದಾರೆ ಎಂದು ನ್ಯಾಯಾಲಯದ ಮುಂದೆ ಸಾಕ್ಷಿ ನೀಡಿರುವ ವಿಚಾರ ನಿಮಗೆ ತಿಳಿದಿದೆಯಾ ಎಂಬ ಪ್ರಶ್ನೆಗೆ ಸಾಕ್ಷಿ, ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಚಾಸಾ.2ರಿಂದ 7 ತಾವಾಗಿಯೇ ಸ್ವಯಂ ಹೇಳಿಕೆಯನ್ನು ಠಾಣೆಗೆ ಬಂದು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಿ:07.08.2014ರಂದು ಚಾಸಾ.2, 16, 18ರಿಂದ 22ರವರು

ನನ್ನ ಸಮಕ್ಷಮ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ಸಾಕ್ಷಿಗಳು ಯಾವುದೇ ಹೇಳಿಕೆ ನೀಡದೇ ಇರುವ ಕಾರಣ, ಸಿಡಿ ಅಥವಾ ಪೊಲೀಸ್ ಡೈರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ನಿರಪರಾಧಿಗಳು ಇದ್ದು, ಪ್ರಕರಣಕ್ಕೆ ಆರೋಪಿಗಳು ಬೇಕು ಎಂದು ಇದಕ್ಕೆ ಸಂಬಂಧ ಇಲ್ಲದಂತಹ ವ್ಯಕ್ತಿಗಳನ್ನು ಆರೋಪಿಗಳನ್ನಾಗಿ ಸೇರಿಸಲಾಗಿದೆ ಎಂದರೆ ಸರಿಯಲ್ಲ. ಘಟನೆ ನಡೆದಿದೆ ಎಂದು ಹೇಳುವಂತಹ ಸಮಯ ಕತ್ತಲಿರುವಂತಹ ಸಮಯ ಎಂದರೆ ಸರಿ. ಕತ್ತಲೆ ಇದ್ದ ಕಾರಣ, ಅಲ್ಲಿ ಯಾರ್ಯಾರು ಇದ್ದರು ಎಂದು ಗುರುತು ಮಾಡಲು ಸಾಧ್ಯವಿಲ್ಲ ಎಂದರೆ ಸಾಕ್ಷಿ, ಪಿರ್ಯಾದಿ ಯಾರ್ಯಾರು ಎಂದು ತನ್ನ ದೂರಿನಲ್ಲಿ ಹೇಳಿಕೊಂಡಿದ್ದಾನೆ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ಚಾಸಾ.1 ನಿ.ಪಿ.1ರಂತೆ ದೂರು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಯಾವುದೇ ತನಿಖೆ ನಡೆಸಿಲ್ಲ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ. ಕೆ.ಸಿ.ಎಂ, ವಕೀಲರಿಂದ 11ನೇ ಆರೋಪಿಯ ಪರವಾಗಿಃ

ನಾನು ಈ ಪ್ರಕರಣದ ತನಿಖೆಯನ್ನು ಕೃತ್ಯಕ್ಕೆ ಸಂಬಂಧಿಸಿದಂತೆ ಎಸ್.ಸಿ.,/ಎಸ್.ಟಿ., ಕಾಯಿದೆ ಅನ್ವಯ ಆಗುವವರೆಗೆ ನಡೆಸಿರುತ್ತೇನೆ. ಆಸ್ಪತ್ರೆ 11ನೇ ಆರೋಪಿಗೆ ಸೇರಿದ್ದು ಎಂದು ತೋರಿಸಲು ಏನಾದರೂ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ, ಪ್ರತ್ಯೇಕ

ದಾಖಲಾತಿ ಇರುವುದಿಲ್ಲ, ಅದು 10ನೇ ಆರೋಪಿ ಮತ್ತು 11ನೇ ಆರೋಪಿಯ ಜಂಟಿ ಹೆಸರಿನಲ್ಲಿರುತ್ತದೆ. ಜಂಟಿ ಹೆಸರಿನಲ್ಲಿದೆ ಎಂದು ತೋರಿಸಲು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾವು ಈ ಪ್ರಕರಣದಲ್ಲಿ ಕಲೆಹಾಕಿರುವಂತಹ ದಾಖಲಾತಿಗಳ ಅನುಸಾರ ಸದರಿ ಆಸ್ಪತ್ರೆ 11ನೇ ಆರೋಪಿಯ ಹೆಸರಿಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ಘಟನೆ ನಡೆದಿದೆ ಎಂದು ಹೇಳುಂವತ ದಿನದಂದು ಯಾವೆಲ್ಲಾ ವೈದ್ಯರು ಕರ್ತವ್ಯದಲ್ಲಿ ಇದ್ದರು ಎಂಬುದರ ಸಲುವಾಗಿ ಈಗಾಗಲೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ದೋಷಾರೋಪಣ ಪಟ್ಟಿಯ ಕಡತವನ್ನು ಪರಿಶೀಲಿಸಿ ಸಾಕ್ಷಿ ಇದರಲ್ಲಿ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನ್ಯಾಯಾಲಯಕ್ಕೆ ಹಾಜರುಪಡಿಸಿದಂತಹ ಅನಸ್ತೇಷಿಯಾ ದಾಖಲಾತಿಯಲ್ಲಿ ಅದು ಚಾಸಾ.1 ಗಂಗದಾಸಪ್ಪನದ್ದೇ ಎಂದು ತೋರಿಸಲು ಯಾವುದೇ ನಮೂದನೆ ಇಲ್ಲ ಎಂದರೆ ಸಾಕ್ಷಿ, ಅದು ಆಸ್ಪತ್ರೆಯಿಂದ ಕೊಟ್ಟಂತಹ ದಾಖಲಾತಿ ಎಂದು ಉತ್ತರಿಸಿರುತ್ತಾರೆ. ನಮಗೆ ನೀಡಿರುವಂತಹ ದಾಖಲಾತಿಯಲ್ಲಿ ಏನೂ ನಮೂದನೆ ಇಲ್ಲ ಎಂದು ಮತ್ತೆ ನೀವೇನಾದರೂ ಆಸ್ಪತ್ರೆಯವರನ್ನು ವಿವರಣೆ ಕೇಳಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ, ಆಸ್ಪತ್ರೆಯಿಂದ ಏನು ದಾಖಲಾತಿಯನ್ನು ನೀಡಿದ್ದಾರೆ ಅದರ ಸಂಪೂರ್ಣ ಕಡತವನ್ನು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯೊಂದಿಗೆ ಹಾಜರುಪಡಿಸಲಾಗಿದೆ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ಆಸ್ಪತ್ರೆಯಿಂದ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿದಂತಹ ದಾಖಲಾತಿಯಲ್ಲಿ 11ನೇ

ಆರೋಪಿಯ ಸೀಲ್ ಮತ್ತು ಸಹಿ ಇದೆಯ ಎಂಬ ಪ್ರಶ್ನೆಗೆ ಸಾಕ್ಷಿ, ಕೆಲವು ದಾಖಲಾತಿಯಲ್ಲಿ ಸಹಿ ಇದ್ದು ಅದು ಅವರದ್ದೇ ಸಹಿ ಹೌದೋ ಅಲ್ಲವೋ ಎಂದು ನನಗೆ ನಿಖರವಾದ ಮಾಹಿತಿ ಇಲ್ಲ.

11ನೇ ಆರೋಪಿ ನೀಡಿರುತ್ತಾರೆ ಎಂದು ಹೇಳುವಂತ ಆಸ್ಪತ್ರೆ ದಾಖಲಾತಿಗಳಲ್ಲಿ 11ನೇ ಆರೋಪಿ ಸಹಿ ಎಲ್ಲಿದೆ ಎಂದು ನನಗೆ ನಿಖರವಾಗಿ ಗುರುತಿಸಲು ಸಾಧ್ಯವಿಲ್ಲ. ನಿಮ್ಮ ತನಿಖೆಯಲ್ಲಿ ಸದರಿ ದಾಖಲಾತಿಯಲ್ಲಿ 11ನೇ ಆರೋಪಿಯ ಸಹಿ ಯಾವುದು ಎಂದು ಗುರುತಿಸಲು ಏನಾದರೂ ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ಉತ್ತರಿಸಿರುತ್ತಾರೆ. ನ್ಯಾಯಾಲಯಕ್ಕೆ ನೀಡಿರುವ ಆಸ್ಪತ್ರೆಯ ದಾಖಲಾತಿಗಳಲ್ಲಿ 11ನೇ ಆರೋಪಿಯ ಸಹಿ ಎಲ್ಲೂ ಇಲ್ಲ ಎಂದರೆ ಸರಿಯಲ್ಲ. ದಿಃ 07.08.2014 ರಂದು ಚಾಸಾಃ 16, 18 ಮತ್ತು 19 ನೀಡಿರುತ್ತಾರೆ ಎಂದು ಹೇಳುವ ಹೇಳಿಕೆಯಲ್ಲಿ ಮತ್ತು ಚಾಸಾಃ 2 ರಿಂದ 12 ನೀಡಿರುತ್ತಾರೆ ಎಂದು ಹೆಳುವ ಹೇಳಿಕೆಯಲ್ಲಿ 11ನೇ ಆರೋಪಿಯ ವಿರುದ್ದ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾಃ1 ಆಸ್ಪತ್ರೆಯಲ್ಲಿ ಮತ್ತು ಠಾಣೆಯಲ್ಲಿ ಕೊಟ್ಟಿರೂತ್ತಾನೆ ಎಂದು ಹೇಳುವ ಹೇಳಿಕೆಯುಲ್ಲಿ 11ನೇ ಅರೋಪಿ ಬಗ್ಗೆ ಯಾವುದೇ ವಿಚಾರವನ್ನು ಹೇಳಿಕೊಂಡಿಲ್ಲ ಎಂದರೆ ಸಾಕ್ಷಿ ಆತನ ಹೆಸರನ್ನು ಹೇಳಿಕೊಂಡಿಲ್ಲ ಎಂದು ಉತ್ತರಿಸುತ್ತಾರೆ.

ಈ ಪ್ರಕರಣಕ್ಕೂ 11ನೇ ಆರೋಪಿಗೂ ಯಾವುದೇ ರೀತಿಯಲ್ಲ ಸಂಬಂಧ ಇಲ್ಲದೇ ಇದ್ದರೂ ಸಹ ಆತನನ್ನು ಆರೋಪಿಯನ್ನಾಗಿ ಮಾಡಾಲಗಿದೆ ಎಂದರೆ ಸರಿಯಲ್ಲ. 11ನೇ ಆರೋಪಿ ಈ ಪ್ರಕರಣದಲ್ಲಿ ಯಾವ ರೀತಿ ಭಾಗಿಯಾಗಿರುತ್ತಾನೆ ಎಂದು ಎಲ್ಲಿಯೂ ಹೇಳಿಕೊಂಡಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ. ಕೆ.ಜೆ.ಜಿ, ವಕೀಲರಿಂದ 1 ಮತ್ತು 2ನೇ ಆರೋಪಿಗಳ ಪರವಾಗಿಃ

ವಕೀಲರನ್ನು ಕೂಗಿಸಲಾಯಿತು. ನ್ಯಾಯಾಲಯದಲ್ಲಿ ಗೈರು ಹಾಜರಿರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ 10ನೇ ಅರೋಪಿ ಪರವಾಗಿ ಶ್ರೀ. ಡಿ ಎಸ್ ಎಂ ವಕೀಲರ ಪರವಾಗಿ ಜೆ ಪಿ ವಕೀಲರು ಸಮಯಾವಾಕಾಶ ಕೋರಿದ್ದು ಈ ಪ್ರಕರಣವು 10 ವರ್ಷ ಹಳೆಯ ಪ್ರಕರಣವಾಗಿದ್ದು ಈಗಾಗಲೇ ಸಾಕ್ಷಿದಾರರಿಗೆ ಹಲವಾರು ಬಾರಿ ಸಮನ್ಸ್ ಮತ್ತು ವಾರಂಟನ್ನು ನೀಡಿ ಮರು ಜಾರಿಗೆ ಆದೇಶ ನೀಡಿದ್ದು, ವಕೀಲರ ಹಾಜರಾತಿಯಲ್ಲೇ ಸಮನ್ಸ್ ನೀಡಿದ್ದು ಈ ಸಾಕ್ಷಿಯು ತನಿಖಾಧಿಕಾರಿಯಾಗಿದ್ದು ಉಳಿದ ಆರೋಪಿಗಳ ಪರವಾಗಿ ಪಾಟೀ ಸವಾಲು ಮುಕ್ತಾಯಗೊಂಡಿರುವ ಕಾರಣ 10ನೇ ಅರೋಪಿಯ ಪಾಟೀ ಸವಾಲಿಗಾಗ ಸಮಯವಾಕಾಶ ನೀಡಲು ಯಾವುದೇ ಸಮಂಜಸ ಕಾರಣಗಳು ಇರುವುದಿಲ್ಲ. ಆ ಕಾರಣ ಕೋರಿಕೆಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.